# ಮಂಗಳಯಾನಕ್ಕೆ ಇಂಧನವಾದ ಕನ್ನಡಿಗ ಜಗನ್

■ ಸಂದರ್ಶನ: **ಸುಮನಾ ಕೆ.**

'ಮಿಷನ್ ಮಂಗಲ್' ಈಚೆಗೆ ಭಾರೀ ಕುತೂಹಲ ಮೂಡಿಸಿದ ಚಿತ್ರ. ಮಂಗಳ ಗ್ರಹಕ್ಕೆ ಮೊದಲ ಬಾರಿಗೆ ಉಪಗ್ರಹ ಉಡಾವಣೆ ಮಾಡಲು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ವಿಜ್ಞಾನಿಗಳು ಹಾಗೂ ಸಿಬ್ಬಂದಿ ಪಟ್ಟ ಪರಿಶ್ರಮದ ಕತೆ ಈ ಚಿತ್ರದ್ದು. ಅಕ್ಷಯ್‌ಕುಮಾರ್, ವಿದ್ಯಾ ಬಾಲನ್, ತಾಪ್ಸೀ ಪನ್ನು, ಸೋನಾಕ್ಷಿ ಸಿನ್ಹಾ, ನಿತ್ಯಾ ಮೆನನ್ ಹಾಗೂ ಕನ್ನಡದ ದತ್ತಣ್ಣ ಚಿತ್ರದ ಪ್ರಮುಖ ಪಾತ್ರಧಾರಿಗಳು. ಮಂಗಳಗ್ರಹಕ್ಕೆ ಚಿತ್ರರಂಗವನ್ನು ಕರೆದೊಯ್ದ ನಿರ್ದೇಶಕ ಜಗನ್ ಶಕ್ತಿ ಕನ್ನಡಿಗ. ಬೆಂಗಳೂರಿನ ಹಲಸೂರಿನ ಬಜಾರ್ ಸ್ಟ್ರೀಟ್‌ನಲ್ಲಿ ಹುಟ್ಟಿ ಬೆಳೆದ ಅವರು ಈಗ ಬಾಲಿವುಡ್‌ನಲ್ಲಿ ಹಬ್ಬಿ ಬೆಳೆದಿದ್ದಾರೆ. ತಮ್ಮ ಮೊದಲ ಸಿನಿಮಾದಲ್ಲಿಯೇ ಬಿ–ಟೌನ್ ಗಮನ ಸೆಳೆದಿದ್ದಾರೆ.



ಜಗನ್ ಶಕ್ತಿ ಜೊತೆ ಅಕ್ಷಯ್ ಕುಮಾರ್

◆ **ಮಂಗಳಯಾನದ ಕುರಿತು ಸಿನಿಮಾ ಮಾಡಬಹುದು ಎಂದು ನಿಮಗೆ ಅನ್ನಿಸಿದ್ದು ಹೇಗೆ?**

ನನ್ನ ಅಕ್ಕ ಸುಜಾತ ಕೃಷ್ಣನ್ ಇಸ್ರೊದಲ್ಲಿ ಸೀನಿಯರ್ ಎಂಜಿನಿಯರ್. ಅವರು 20 ವರ್ಷಗಳಿಂದ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿನ ಅನುಭವಗಳನ್ನು ಅವರು ಹಂಚಿಕೊಳ್ಳುತ್ತಿದ್ದರು. ಅಕ್ಕ ಹೇಳುತ್ತಿದ್ದ ಸನ್ನಿವೇಶಗಳಲ್ಲಿ ನನಗೆ ಸಿನಿಮಾ ಸಾಧ್ಯತೆಗಳು ಕಾಣಿಸುತ್ತಿದ್ದವು. ಈ ಕುರಿತು ಒಂದು ಸಿನಿಮಾ ಮಾಡಿದರೆ ಚೆನ್ನಾಗಿರುತ್ತೆ ಎಂದು ಆಗಲೇ ಅಂದುಕೊಳ್ಳುತ್ತಿದ್ದೆ.

◆ **ಆ ಕನಸು ನನಸಾಗಿದ್ದು ಹೇಗೆ?**

ಮೂರ್ನಾಲ್ಕು ತಿಂಗಳು ಈ ಸಿನಿಮಾಕ್ಕಾಗಿ ಒಬ್ಬನೇ ಕೆಲಸ ಮಾಡಿದ್ದೇನೆ. ಇಸ್ರೊದವರಿಗೆ ಅಧಿಕೃತವಾಗಿ ಪತ್ರ ಬರೆದು, ಮಂಗಳಯಾನದ ಕುರಿತು ಸಿನಿಮಾ ಮಾಡುತ್ತಿರುವುದಾಗಿ ಮನವಿ ಮಾಡಿಕೊಂಡೆ. ಉಪಗ್ರಹ ಉಡಾವಣೆ ಮಾಡಿದ ತಂಡದವರ ಸಂದರ್ಶನ ಮಾಡಿದೆ. ಇಸ್ರೊದವರು ಕೂಡ ಸಿನಿಮಾಕ್ಕಾಗಿ ಅಗತ್ಯವಾದ ಸಂಶೋಧನಾ ಸಾಮಗ್ರಿಗಳು ಹಾಗೂ ವಿಜ್ಞಾನಿಗಳಿಂದ ಮಾಹಿತಿ ಕೊಟ್ಟರು. ಅವರ ಸಂಶೋಧನೆಯ ಬಗ್ಗೆ ಓದಿಕೊಂಡೆ. ಅಲ್ಲಿಗೆ ಹೋಗಿ ಸಂಶೋಧನೆಯ ವಿವಿಧ ಹಂತಗಳ ಬಗ್ಗೆ ಅರ್ಥ ಮಾಡಿಕೊಂಡೆ. ಮಂಗಳಯಾನ ಎನ್ನುವುದು ಒಂದು ತಂಡದ ಪರಿಶ್ರಮದ ಫಲ. ಹಾಗಾಗಿ ತಂಡದ ನಾಯಕನ ಬಗ್ಗೆ ಮಾತ್ರ ಸಿನಿಮಾ ಮಾಡಲು ನನಗೆ ಇಷ್ಟವಿರಲಿಲ್ಲ. 'ಮಿಷನ್ ಮಂಗಲ್' ಸಿನಿಮಾದ ಎಲ್ಲ ಪಾತ್ರಗಳೂ ಮುಖ್ಯಪಾತ್ರಗಳೇ.

ಇಸ್ರೊ ಒಳಗಡೆ ಶೂಟಿಂಗ್‌ಗೆ ಅವಕಾಶವಿರಲಿಲ್ಲ. ಹಾಸನದ ಇಸ್ರೊ ಸಂಸ್ಥೆಯ ಮಾಸ್ಟರ್ ಕಂಟ್ರೋಲ್ ಫೆಸಿಲಿಟಿ, ಬೆಂಗಳೂರು ಮುಖ್ಯ ಕಚೇರಿ ಹೋಲುವ ಹಾಗೆ, ನಾನು ಅಲ್ಲಿ ಏನು ನೋಡಿದ್ದೇನೋ ಹಾಗೆ ಸೆಟ್ ಹಾಕಿಸಿದೆ. ಕಲಾನಿರ್ದೇಶಕ ಹಾಗೂ ವಿಎಫ್‌ಎಕ್ಸ್ ತಂಡ ತಯಾರಿಸಿದ ರಾಕೆಟ್ ಸಿನಿಮಾದ ಪ್ರಮುಖ ಭಾಗ.

◆ **ಮೊದಲ ನಿರ್ದೇಶನದಲ್ಲಿಯೇ ಸೈನ್ಸ್ ಫಿಕ್ಷನ್‌ನಂತಹ ವಿಷಯ ಆಯ್ಕೆ ಮಾಡಿಕೊಂಡಿದ್ದು ಯಾಕೆ?**

ಎಷ್ಟೇ ಕಷ್ಟ ಆದ್ರೂ ಅನಿಸಿದ್ದನ್ನೇ ಮಾಡ್ಬೇಕು ಎನ್ನುವುದು ನನ್ನ ಪಾಲಿಸಿ. ಈ ಹುಂಬತನವೇ ಸಿನಿಮಾ ಮಾಡೋಕೆ ಧೈರ್ಯ ತುಂಬಿದ್ದು. 'ಅವೆಂಜರ್ಸ್'ನಂತಹ ಸಿನಿಮಾಗಳ ಅಭಿಮಾನಿ ನಾನು. ಅಂತಹದ್ದೇ ಥ್ರಿಲ್ ಹುಟ್ಟಿಸುವ ಸಿನಿಮಾವನ್ನು ನಾನು ನಿರ್ದೇಶನ ಮಾಡಬೇಕು ಎಂದುಕೊಂಡಿದ್ದೆ. ಇದೊಂದು ಮೂಮೆಂಟ್ ಡ್ರಾಮ.

◆ **ಕಲಾವಿದರ ಆಯ್ಕೆ ಪ್ರಕ್ರಿಯೆ ಹೇಗಿತ್ತು?**

ಅಕ್ಷಯ್ ಕುಮಾರ್ ಜೊತೆ 'ಹಾಲಿಡೇ', 'ಪ್ಯಾಡ್‌ಮ್ಯಾನ್' ಸಿನಿಮಾಗಳಲ್ಲಿ ಒಟ್ಟಿಗೆ ಕೆಲಸ ಮಾಡಿದ್ದೇನೆ. ಅವರು ನನ್ನ ಕ್ಲೋಸ್ ಫ್ರೆಂಡ್. ಒಮ್ಮೆ ಸಿನಿಮಾದ ಶೂಟಿಂಗ್‌ಗೆ ಹೋಗುವಾಗ ನನ್ನನ್ನೂ ಬರುವಂತೆ ಕರೆದರು. ಹಾಗೆ ಹೋದಾಗ ಇಂತಹದ್ದೊಂದು ಚಿತ್ರಕತೆಯಿದೆ ಎಂದು ಅವರ ಬಳಿ ಹೇಳಿದೆ. ಅವರು ಆಸಕ್ತಿಯಿಂದ ಕೇಳಿಸಿಕೊಂಡು, 'ನಾನು ಮಾಡೇ ಮಾಡ್ತೀನಿ' ಎಂದು ಒಪ್ಪಿಕೊಂಡರು. ಅವರು ಗ್ರೀನ್ ಸಿಗ್ನಲ್ ಕೊಟ್ಟ ತಕ್ಷಣ ನಾನು ಸಿನಿಮಾಕ್ಕೆ ತಯಾರಿ ಮಾಡಿಕೊಂಡೆ. ಕತೆ ಬರೆಯುವಾಗ ತಾರಾ ಶಿಂಧೆ ಪಾತ್ರಕ್ಕೆ ಶ್ರೀದೇವಿ ಅವರು ನನ್ನ ತಲೆಯಲ್ಲಿದ್ದರು. ಅವರ ಜೊತೆ 'ಇಂಗ್ಲಿಷ್ ವಿಂಗ್ಲಿಷ್' ಸಿನಿಮಾದಲ್ಲಿ ಕೆಲಸ ಮಾಡಿದ್ದೆ. ಆದರೆ ನಮ್ಮ ದುರದೃಷ್ಟ,